

ಕೊರೊನಾ ಸೋಂಕಿನ ಬಹು ದೊಡ್ಡ ಪೆಟ್ಟು ಬಿದ್ದಿರುವುದು ಮಕ್ಕಳ ಮೇಲೆ. ಶಾಲೆಗಳು ಮುಚ್ಚಿರುವುದರಿಂದ, ಮನೆಯಲ್ಲಿಯೇ ಉಳಿಯಬೇಕಾಗಿರುವ ಎಳೆಯರು ಕಲಿಕೆಯ ಸಾಂಪ್ರದಾಯಿಕ ಅವಕಾಶಗಳಿಂದ ವಂಚಿತರಾಗಿದ್ದಾರೆ. ಆನ್‌ಲೈನ್ ಶಿಕ್ಷಣದ ಬೆಳಕಿಂಡಿ ತೆರೆದುಕೊಂಡಿದ್ದರೂ, ಅದು ಒಂದು ಸಾಧ್ಯತೆಯಾಗಿಯಷ್ಟೇ ಉಳಿದುಕೊಂಡಿದೆ. ಮೇಷ್ಟ್ರು ಮತ್ತು ಶಿಷ್ಯರ ನಡುವೆ ಶಾಲೆಗಳಲ್ಲಿ ರೂಪುಗೊಳ್ಳಬಹುದಾದ ಸಾವಯವ ಸಂಬಂಧವನ್ನು ಆನ್‌ಲೈನ್ ಶಿಕ್ಷಣದಿಂದ ನಿರೀಕ್ಷಿಸುವಂತಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿನ ದುರ್ಬಲ ಅಂತರ್ಜಾಲ ಸಂಪರ್ಕ ಕೂಡ ಬಹುತೇಕ ಮಕ್ಕಳು ಆನ್‌ಲೈನ್ ಶಿಕ್ಷಣದಿಂದ ವಂಚಿತರಾಗುವಂತೆ ಮಾಡಿದೆ. ಕೊರೊನಾದ ಕರಿನೆರಳು ಮುಂಬರುವ ಶೈಕ್ಷಣಿಕ ವರ್ಷದಲ್ಲೂ ಮುಂದುವರಿಯುವ ನಿರೀಕ್ಷೆಯಿದ್ದು, ಮಕ್ಕಳಿಗೆ ಶಾಲೆಯೆನ್ನುವುದು ಸದ್ಯಕ್ಕೆ ಮರೀಚಿಕೆಯಾಗಿಯೇ ಉಳಿಯುವ ನಿರೀಕ್ಷೆಯಿದೆ. ಈ ಸಂಕ್ರಮಣ ಸಂದರ್ಭದಲ್ಲಿ, ಮಕ್ಕಳಿಗೆ ಕಲಿಕೆಯೊಂದಿಗಿನ ನಂಟನ್ನು ಉಳಿಸುವಂತಹ ಮಾರ್ಗಗಳನ್ನು ಕಂಡುಕೊಳ್ಳುವ ಸವಾಲನ್ನು ಶಿಕ್ಷಣಕ್ಷೇತ್ರ ಎದುರಿಸುತ್ತಿದೆ. ಮಕ್ಕಳ ಶಿಕ್ಷಣ ವಿಶ್ವದ ನಾಳೆಗಳನ್ನು ಪ್ರಭಾವಿಸುವುದರಿಂದಾಗಿ, ಶಿಕ್ಷಣ ಕ್ಷೇತ್ರದ ಸವಾಲು ಇಡೀ ಸಮಾಜಕ್ಕೆ ಸಂಬಂಧಿಸಿದ್ದಾಗಿದೆ.



■ ಎ.ಪಿ. ಅಶ್ವಿನ್ ಕುಮಾರ್

ಸೀನಿಯರ್ ಫೆಲೊ, ಸೆಂಟರ್ ಫಾರ್ ಲರ್ನಿಂಗ್ ಫ್ಯೂಚರ್ಸ್, ಅಹಮದಾಬಾದ್ ವಿಶ್ವವಿದ್ಯಾಲಯ

